ಅಂದಾಜು ಪತ್ರಿಕೆಗಳನ್ನು ತಯಾರಿಸಲಾಗಿದೆ 2007–08ರ ಸಾಲಿನಲ್ಲಿ ಈ ಕಾಮಗಾರಿಗಳನ್ನು ತೆಗೆದುಕೊಳ್ಳಲು ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿಕೊಳ್ಳಲಾಗುವುದು ಈ ಏತ ನೀರಾವರಿ ಯೋಜನೆಯನ್ನು ಇನ್ನು ಒಂದೂವರೆ ವರ್ಷಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ

ಈ) ಈ ಯೋಜನೆಗೆ ಗುರುತಿಸಲಾಗಿರುವ ಜಲ ಮೂಲವಾದ ಹಿಪ್ಪರಗಿ ಬ್ಯಾರೇಜ್ ಕಡಿಮೆ ಸಾಮರ್ಥ್ಯ ಹೊಂದಿರುವುದರಿಂದ ಮುಂದೆ ನೀರಿನ ಕೊರತೆ ಆಗುವುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿಲ್ಲ ಹಿಪ್ಪರಗಿ ಯೋಜನೆಯಡಿ ನೀರಾವರಿಗಾಗಿ ನಿಗದಿಪಡಿಸಿದ ಕ್ಷೇತ್ರದಲ್ಲಿ ರೈತರು ಯೋಜನೆಯಡಿ ಬೆಳೆಯಬೇಕಾದ ಮುಂಗಾರು / ಹಿಂಗಾರು ಬೆಳೆಗಳು ಹಾಗೂ ಬೆಳೆ ಪದ್ದತಿಯನ್ನು ಅನುಸರಿಸಿದಲ್ಲಿ ನೀರಿನ ಕೊರತೆ ಉಂಟಾಗುವುದಿಲ್ಲ

ಉ) ಹಾಗಿದ್ದಲ್ಲಿ, ಮಂಜೂರು ಮಾಡಿರುವ ಅನುದಾನದಲ್ಲೇ ಹಿಪ್ಪರಗಿ ಬ್ಯಾರೇಜನ್ನು ಹೊರತುಪಡಿಸಿ ಅಲಮಟ್ಟಿ ಹಿನ್ನೀರಿನಿಂದ ನೀರಿನ ಸೌಲಭ್ಯವನ್ನು ಒದಗಿಸುವುದು ಸೂಕ್ತವಲ್ಲವೆ?

ಪ್ರಸ್ತುತ ಹಂತದಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಊ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಕ್ರಮ ಕೈಗೊಳ್ಳಲಾಗುವುದೇ?

ಪ್ರಸ್ತುತ ಈ ಪ್ರಶ್ನೆ ಉದ್ಭವಿಸುವುದಿಲ್ಲ

**ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1217(1386)**

**ಸದಸ್ಯರ ಹೆಸರು ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)**

**ಉತ್ತರಿಸುವವರು ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)**

ಅ) ಬೆಂಗಳೂರು ನಗರದ ಕೋರಮಂಗಲದಲ್ಲಿರುವ ಕ್ರೀಡಾ ಗ್ರಾಮದಲ್ಲಿ ನಿರ್ಮಿಸಿರುವ ವಸತಿ ಸಮುಚ್ಚಯಗಳ ಸಂಖ್ಯೆ ಎಷ್ಟು?

ಒಂದು (ಹದಿನಾಲ್ಕು ಬ್ಲಾಕ್‌ಗಳು)

ಆ) ಅವುಗಳಲ್ಲಿ ಒಟ್ಟು ಅಪಾರ್ಟ್‌ಮೆಂಟ್‌ಗಳೆಷ್ಟು?

2534

ಇ) ಇದುವರೆಗೂ ಎಷ್ಟು ಅಪಾರ್ಟ್‌ಮೆಂಟ್‌ಗಳನ್ನು ಮಾರಾಟ ಮಾಡಲಾಗಿರುತ್ತದೆ ಹಾಗೂ ಯಾವ ಆಧಾರದ ಮೇಲೆ ಮಾರಾಟ ಮಾಡಲಾಗಿದೆ,

ಎಲ್ಲಾ ಅಪಾರ್ಟ್‌ಮೆಂಟ್‌ಗಳನ್ನು ಮಾರಾಟ ಮಾಡಲಾಗಿರುತ್ತದೆ Outright sale ಆಧಾರದ ಮೇಲೆ ಮಾರಾಟ ಮಾಡಲಾಗಿದೆ

ಈ) ಮಾರಾಟವಾಗದೆ ಖಾಲಿ ಉಳಿದಿರುವ ಅಪಾರ್ಟ್‌ಮೆಂಟ್‌ಗಳ ಸಂಖ್ಯೆ ಎಷ್ಟು

ಇಲ್ಲ

ಉ) ಎಷ್ಟು ಅಪಾರ್ಟ್‌ಮೆಂಟ್‌ಗಳನ್ನು ಸರ್ಕಾರಿ ನೌಕರರಿಗೆ ಒದಗಿಸಲಾಗಿದೆ?

ಇಲ್ಲ

| | |
|---|---|
| ಬ್ಯುಡಿಸಿಲ್ ಬ್ಲಾಕ್ | 224 |
| ಕೃಷ್ಣ ಬ್ಲಾಕ್ | 204 |
| ಶರಾವತಿ ಬ್ಲಾಕ್ | 169 |
| ಒಟ್ಟು | 597 |

ಅಪಾರ್ಟ್‌ಮೆಂಟ್‌ಗಳನ್ನು ಸರ್ಕಾರಿ ನೌಕರರಿಗೆ ವಾಸಕ್ಕೆ ಹಂಚಿಕೆ ಮಾಡಲು ಲೋಕೋಪಯೋಗಿ ಇಲಾಖೆಗೆ ಹಸ್ತಾಂತರಿಸಲಾಗಿದೆ

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** **1218(1387)**
**ಸದಸ್ಯರ ಹೆಸರು** **ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)**
**ಉತ್ತರಿಸುವ ಸಚಿವರು** **ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)**

ಅ ಹಿಂದುಳಿಗೆ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಕೊರಡಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ

ಆ ಬಂದಿದ್ದಲ್ಲಿ ಯಾವ ಯಾವ ಶಾಲೆಗಳಲ್ಲಿ ಕೊರಡಿಗಳ ಕೊರತೆ ಇದೆ

ಪ್ರಾಥಮಿಕ ಶಾಲೆಗಳಿಗೆ ಯಾವುದೇ ಕೊರಡಿ ಕೊರತೆ ಇರುವುದಿಲ್ಲ ಆದರೆ ಸರ್ಕಾರಿ ಪ್ರೌಢ ಶಾಲಗಳಿಗೆ ಕೊರಡಿ ಕೊರತೆ ಇರುತ್ತದೆ ಅದರ ವಿವರ ಈ ಕೆಳಕಂಡಂತೆ ಇರುತ್ತದೆ

| ಕ್ರ.ಸಂ | ಗ್ರಾಮದ ಹೆಸರು | ಸಂಖ್ಯೆ |
|---|---|---|
| 01 | ನಪಲೂರು | 2 |
| 02 | ಮುಳ್ಳೂರು | 2 |
| 03 | ಕೊಳ್ಳೇಗಾಲ | 5 |
| 04 | ಗುಂಬಳ್ಳಿ | 5 |
| 04 | ಹಿರಸವಾಡಿ | 5 |
| 05 | ಚಾಮರಾಜನಗರ | 5 |

ಇ ಈ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಬಂದಿದೆ